# GATWU

## Avery Dennison (India) Pvt. Ltd Branch

ಆತ್ಮೀಯ ಸಂಗಾತಿಗಳೇ,

ಈ ಕೆಳಗಿನ ಸಂಗತಿಯನ್ನೊಮ್ಮೆ ಯೋಚಿಸಿ ನೋಡಿ. . . .

- ಕಾರ್ಮಿಕ ಹೋರಾಟದ ಇತಿಹಾಸದಲ್ಲಿ ಯಾವುದೇ ಕಂಪನಿಯು ತನ್ನ ಕಂಪನಿಯಲ್ಲಿ ಕಾರ್ಮಿಕರ ಯೂನಿಯನ್ ಇರಬಾರದೆಂದೇ ಬಯಸುತ್ತದೆ ಎಂಬುದು ಸಾರ್ವಕಾಲಿಕ ಸತ್ಯ.
- ಕಾರ್ಮಿಕರು ತಮಗೆ ಯಾವ ಯೂನಿಯನ್ ಬೇಕು ಎಂಬುದನ್ನು ಆಯ್ಕೆ ಮಾಡಿಕೊಳ್ಳುವುದು ಅವರ ಹಕ್ಕು.
- ಅಂತಹ ಯೂನಿಯನ್‌ನ ಒತ್ತಡದ ಫಲವಾಗಿ ಆಡಳಿತವರ್ಗವು ಯೂನಿಯನ್ ಜೊತೆಗೆ ಮಾತುಕತೆ ನಡೆಸಬಹುದು ಮತ್ತು ಒಪ್ಪಂದವನ್ನು ಮಾಡಿಕೊಳ್ಳಬಹುದು.

ಸಂಗಾತಿಗಳೇ, ಯೋಚಿಸಿ,

**ಆದರೆ ಆಡಳಿತವರ್ಗವೇ ನಮಗೆ ಇದೇ ಯೂನಿಯನ್ ಬೇಕೆಂದು ಹಠ ಹಿಡಿದರೆ ಅದರ ಉದ್ದೇಶವೇನು?**

ಆ ಯೂನಿಯನ್ ಆಡಳಿತವರ್ಗದ ಕೈಗೊಂಬೆಯಾಗಿರುತ್ತದೆ. ಆ ಯೂನಿಯನ್ ಭ್ರಷ್ಟವಾಗಿರುತ್ತದೆ. ಆ ಯೂನಿಯನ್ ಕಾರ್ಮಿಕರ ಹಿತಾಸಕ್ತಿಯನ್ನು ಕಡೆಗಣಿಸಿ ಆಡಳಿತವರ್ಗಕ್ಕೆ ಕಾರ್ಮಿಕರನ್ನು ಮಾರಾಟ ಮಾಡಿರುತ್ತದೆ. ಅಂತಹ ಯೂನಿಯನ್ ಆಡಳಿತವರ್ಗದ ಏಜೆಂಟ್‌ನಂತೆ ವರ್ತಿಸುತ್ತಿರುತ್ತದೆ.

ಎವೆರಿ ಡೆನಿಸನ್ (ಇಂಡಿಯಾ) ಪ್ರೈ.ಲಿ ಕಂಪನಿಯಲ್ಲಿ ಈ ರೀತಿಯ ಲಕ್ಷಣಗಳು ಯಾವ ಯೂನಿಯನ್‌ನಲ್ಲಿ ಇವೆ, ನೀವೆ ಯೋಚಿಸಿ, ನಿರ್ಧರಿಸಿ.

ಹಾಗೂ ಅದೇ ಯೂನಿಯನ್ ನಮಗೆ ಬೇಕು ಎಂದು ನಮ್ಮ ಆಡಳಿತವರ್ಗವು ಹಠ ಹಿಡಿಯುತ್ತಿರುವುದರ ಹಿಂದಿರುವ ಉದ್ದೇಶವೇನು?

ನಿಮಗೇ ಗೊತ್ತಿರುವ ಹಾಗೆ, ಮ್ಯಾನೇಜ್‌ಮೆಂಟ್‌ನಿಂದ ಹಣ ತೆಗೆದುಕೊಂಡು ಕಾರ್ಮಿಕರ ಹಿತಾಸಕ್ತಿಯನ್ನು ಬಿಟ್ಟುಕೊಟ್ಟಿರುವವರು ಯಾರು?

ನಮ್ಮ ಕಂಪನಿಯ ಆಡಳಿತವರ್ಗ ಮಾತ್ರವಲ್ಲ, ನಾವು ನಂಬಿದ ಯೂನಿಯನ್ ಸಹ ನಮ್ಮನ್ನು ಶೋಷಿಸುತ್ತಿತ್ತು. ನಮಗಾಗುತ್ತಿದ್ದ ಶೋಷಣೆ ತಾರತಮ್ಯ ನೀತಿಯನ್ನು ಮನಗಂಡು ನಾವೆಲ್ಲ GATWU (ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್) ಐನ ಅಡಿಯಲ್ಲಿ ನಮಗಾಗುತ್ತಿರುವ ಅನ್ಯಾಯದ ಬಗ್ಗೆ ಪ್ರಶ್ನಿಸುತ್ತಿದ್ದೇವೆ.

ADWU ಯೂನಿಯನ್‌ನಲ್ಲಿ ನಾವು ನಂಬಿಕೆ ಕಳೆದುಕೊಂಡು ರಾಜೀನಾಮೆ ನೀಡಿ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಅಡಿಯಲ್ಲಿ ಒಂದಾಗಿ 300ಕ್ಕೂ ಹೆಚ್ಚು ಕಾರ್ಮಿಕರು ವೈಯಕ್ತಿಕವಾಗಿ ಬರೆದುಕೊಟ್ಟಿದ್ದರೂ ಬಹುಸಂಖ್ಯಾತ ಕಾರ್ಮಿಕರ ಒಪ್ಪಿತವಾದ GATWU ಜೊತೆ ಮಾತುಕತೆ ನಡೆಸದೆ ಭ್ರಷ್ಟ ಮತ್ತು ಆಡಳಿತವರ್ಗದ ಏಜೆಂಟ್ ಮತ್ತು ಕಾರ್ಮಿಕರ ವಿರೋಧಿ ಯೂನಿಯನ್ ಜೊತೆ ಮಾತುಕತೆ ನಡೆಸುತ್ತಿರುವುದರ ಬಗ್ಗೆ ತಾವು ಮತ್ತೆ ಮತ್ತೆ ಯೋಚಿಸಿ, ನಿರ್ಧರಿಸಿ,

ನಾವೆಲ್ಲರೂ ಈ GATWU ನಮ್ಮ ಯೂನಿಯನ್ ಎಂದು ಸ್ಪಷ್ಟವಾಗಿ ಬರೆದುಕೊಟ್ಟಿದ್ದರೂ ಸಹ ನಮ್ಮನ್ನು ಏಕೆ ಮಾತುಕತೆಗೆ ಕರೆಯುತ್ತಿಲ್ಲ. ಅಲ್ಪ ಸಂಖ್ಯಾತ ಯೂನಿಯನ್ ಸದಸ್ಯರನ್ನು ಬೆಳಿಗ್ಗಿನಿಂದ ಸಂಜೆಯವರೆಗೂ ಕೆಲಸ ಮಾಡಲು ಬಿಡದೇ ಕಾನ್ಫರೆನ್ಸ್ ಹಾಲ್‌ನಲ್ಲಿ ಕುಳ್ಳಿರಿಸಿಕೊಂಡು ಮಾಡುತ್ತಿರುವ ಸಂಚು ಯಾವುದು? ಇದರಿಂದ ಕಂಪನಿಗೆ ನಷ್ಟವಾಗುತ್ತಿಲ್ಲವೇ? ಮ್ಯಾನೇಜ್‌ಮೆಂಟ್‌ಗೆ ಆ ಯೂನಿಯನ್‌ನಲ್ಲಿ ಮಾತ್ರ ಏಕೆ ಆಸಕ್ತಿ? ಬಹುಸಂಖ್ಯಾತ ಕಾರ್ಮಿಕರು ತಿರಸ್ಕರಿಸಿರುವ ಯೂನಿಯನ್ನೇ ಬೇಕೆಂದು ಹಠಮಾಡಿ ಆಡಳಿತವರ್ಗದ ಕೆಲ ವ್ಯಕ್ತಿಗಳು ತಮ್ಮ ತನು, ಮನ, ಧನ ಎಲ್ಲವನ್ನು ಬಳಸಿ GATWU ವನ್ನು ಒಡೆಯಲು ಸತತವಾಗಿ ಪ್ರಯತ್ನಿಸುತ್ತಿರುವುದು ಯಾಕೆ?

ಯೂನಿಯನ್ ಎನ್ನುವುದು ಕಾರ್ಮಿಕರ ಆಯ್ಕೆಯೋ ?? ಮ್ಯಾನೇಜ್‌ಮೆಂಟ್‌ನ ಆಯ್ಕೆಯೋ?

ಪದಾಧಿಕಾರಿಗಳು

Scanned with OKEN Scanner